ದೇವತೆಗಳ ಉಪಾಸನೆ : ಖಂಡ ೨

# ಶ್ರೀವಿಷ್ಣು

## (ಕಾರ್ಯ, ವೈಶಿಷ್ಟ್ಯಗಳು ಮತ್ತು ಉಪಾಸನಾಶಾಸ್ತ್ರ)

(Shri Vishnu) ಕನ್ನಡ (Kannada)


**ಸಂಕಲನಕಾರರು**

**ಹಿಂದೂ ರಾಷ್ಟ್ರದ ಸ್ಥಾಪನೆಯ ಉದ್ಘೋಷಕರು**

**ಸಚ್ಚಿದಾನಂದ ಪರಬ್ರಹ್ಮ ಡಾ. ಜಯಂತ ಬಾಳಾಜಿ ಆಠವಲೆ**

**ಪೂ. ಸಂದೀಪ ಗಜಾನನ ಆಳಶಿ**



**ಸನಾತನ ಸಂಸ್ಥೆ**


**卐 ಭಾರತೀಯ ಭಾಷೆಗಳಿಗನುಸಾರ ಸನಾತನದ ಗ್ರಂಥಗಳ ಸಂಖ್ಯೆ 卐**

ಮರಾಠಿ ೩೪೩, ಆಂಗ್ಲ ೨೦೧, ಕನ್ನಡ ೧೯೭, ಹಿಂದಿ ೧೯೫, ಗುಜರಾತಿ ೬೮, ತೆಲುಗು ೪೫, ತಮಿಳು ೪೩, ಬಂಗಾಲಿ ೨೯, ಮಲಯಾಳಂ ೨೪, ಒರಿಯಾ ೨೨, ಪಂಜಾಬಿ ೧೩, ನೇಪಾಳಿ ೩ ಮತ್ತು ಅಸ್ಸಾಮಿ ೨

**ಡಿಸೆಂಬರ್ ೨೦೨೩ ರವರೆಗೆ ೧೩ ಭಾಷೆಗಳಲ್ಲಿ ೩೬೪ ಗ್ರಂಥಗಳ ೯೪,೯೩,೦೦೦ ಪ್ರತಿ !**

**ಪ್ರಕಾಶಕರು** : ಶ್ರೀ ಸಿದ್ಧೇಶ್ವರ ಧರ್ಮಜಾಗೃತಿ ಸಂಸ್ಥೆ
Shree Siddheshwar Dharmajagruti Sanstha
ಮ.ಸಂ. 2ಬಿ–29ಎ, ಇಂದಿರಾನಗರ, ಕುಕ್ಕಿಕಟ್ಟೆ,
ಉಡುಪಿ 576 101, ಕರ್ನಾಟಕ. ದೂ.ಕ್ರ. : +91 93424 35617
ಇತರ ದೂ.ಕ್ರ. (ಗೋವಾ) : +91 (0832) 2312664
ಇ–ಅಂಚೆ : granth@sanatan.org

**ಮುಖಪುಟದ ಪರಿಕಲ್ಪನೆ** : ಸೌ. ಜಾಹ್ನವಿ ಶಿಂದೆ ಮತ್ತು
ಸದ್ಗುರು (ಕು.) ಅನುರಾಧ ವಾಡೇಕರ್

ಏಪ್ರಿಲ್ ೨೦೧೯ ರಲ್ಲಿ 'ವಿಷ್ಣು ಮತ್ತು ವಿಷ್ಣುವಿನ ರೂಪಗಳು' ಈ ಮೂಲ ಖಂಡವನ್ನು (ಮೊದಲ ಆವೃತ್ತಿ : ೧೦.೧೨.೨೦೦೦) 'ಶ್ರೀವಿಷ್ಣು (ಕಾರ್ಯ, ವೈಶಿಷ್ಟ್ಯಗಳು ಮತ್ತು ಉಪಾಸನಾಶಾಸ್ತ್ರ) ಎಂಬ ಪ್ರಸ್ತುತ ಖಂಡದಲ್ಲಿ ವಿಭಜನೆ ಮಾಡಲಾಗಿದೆ. ಮೂಲ ಖಂಡದ ಕೆಲವು ವಿಷಯಗಳನ್ನು 'ಶ್ರೀರಾಮ' ಮತ್ತು ಶ್ರೀಕೃಷ್ಣ' ಎಂಬ ಕಿರುಗ್ರಂಥಗಳಲ್ಲಿ ಸೇರಿಸಲಾಗಿದೆ.

**First Edition** : Hanuman Jayanti, Kaliyug Varsh 5121
(19th April 2019)

**First Edition Second Reprint** : Makara Sankranti, Kaliyug Varsh 5125
(15th January 2024)

Translated from the original Marathi text 'Shri Vishnu'
ಪ್ರಸ್ತುತ ಗ್ರಂಥವು ಆಂಗ್ಲ ಭಾಷೆಯಲ್ಲೂ ಲಭ್ಯವಿದೆ.

**ಅನುವಾದಕರು** : ಶ್ರೀ. ಗಣೇಶ ರಾಜಾರಾಮ ಕಾಮತ್, ಡಾ. ಪ್ರಕಾಶ ಘಾಳಿ

**ಮುದ್ರಣಸ್ಥಳ** : ಆಮೋದ್ ಗ್ರಾಫಿಕ್ಸ್, ಬೆಂಗಳೂರು – 560 010.

**ದೇಣಿಗೆ ಮೌಲ್ಯ** : ₹ 75/-

**ISBN :** 978-93-87641-55-6 ॐ ಗ್ರಂಥ ಕ್ರ. : 20

© **ಪ್ರಕಾಶಕರು** All rights are reserved. No part of this publication maybe reproduced, stored in a retrieval system or transmitted, in any form or by any means, mechanical, photocopying, recording or otherwise, without prior written permission of the original publisher. Violators will be liable for criminal / civil action.

## ಗ್ರಂಥದ ಸಂಕಲನಕಾರರ ಪರಿಚಯ

# ಸಚ್ಚಿದಾನಂದ ಪರಬ್ರಹ್ಮ ಡಾ. ಜಯಂತ ಆಠವಲೆಯವರ ಅದ್ವಿತೀಯ ಕಾರ್ಯ ಮತ್ತು ವೈಶಿಷ್ಟ್ಯಗಳ ಸಂಕ್ಷಿಪ್ತ ಪರಿಚಯ !



೧. ಅಧ್ಯಾತ್ಮಪ್ರಸಾರಕ್ಕಾಗಿ ‘ಸನಾತನ ಸಂಸ್ಥೆ’ಯ ಸ್ಥಾಪನೆ

೨. ಶೀಘ್ರ ಈಶ್ವರಪ್ರಾಪ್ತಿಗಾಗಿ ‘ಗುರುಕೃಪಾಯೋಗ’ ಎಂಬ ಸಾಧನಾಮಾರ್ಗದ ನಿರ್ಮಿತಿ : ಇದಕ್ಕನುಸಾರ ಸಾಧನೆ ಮಾಡಿ ೨೧.೧೧.೨೦೨೩ ರವರೆಗೆ ೧೨೭ ಸಾಧಕರು ಸಂತರಾಗಿದ್ದು, ೧,೦೪೭ ಸಾಧಕರು ಸಂತತ್ವದೆಡೆಗೆ ಮಾರ್ಗಕ್ರಮಣ ಮಾಡುತ್ತಿದ್ದಾರೆ.

೩. ಆಚಾರಧರ್ಮಪಾಲನೆ, ದೇವತೆಗಳು, ಸಾಧನೆ, ಆದರ್ಶ ರಾಷ್ಟ್ರನಿರ್ಮಾಣ, ಧರ್ಮರಕ್ಷಣೆ ಇತ್ಯಾದಿ ವಿವಿಧ ವಿಷಯಗಳ ಬಗ್ಗೆ ವಿಪುಲ ಗ್ರಂಥಗಳ ನಿರ್ಮಿತಿ

೪. ಹಿಂದುತ್ವವಾದಿ ವರ್ತಮಾನಪತ್ರಿಕೆ ‘ಸನಾತನ ಪ್ರಭಾತ’ದ ಸಂಸ್ಥಾಪಕ-ಸಂಪಾದಕರು

೫. ಹಿಂದೂ ರಾಷ್ಟ್ರದ (ಈಶ್ವರೀ ರಾಜ್ಯದ) ಸ್ಥಾಪನೆಯ ಉದ್ಘೋಷ (೧೯೯೮)

೬. ಹಿಂದೂ ರಾಷ್ಟ್ರದ ಸ್ಥಾಪನೆಗಾಗಿ ಸಂತರು, ಸಂಪ್ರದಾಯಗಳು, ಹಿಂದುತ್ವವಾದಿಗಳು ಮುಂತಾದವರ ಸಂಘಟನೆ ಹಾಗೂ ಅವರಿಗೆ ಮಾರ್ಗದರ್ಶನ !

**(ಸಂಪೂರ್ಣ ಪರಿಚಯಕ್ಕಾಗಿ ಭೇಟಿ ನೀಡಿ ‘www.Sanatan.org/Kannada’)**

**ಸಚ್ಚಿದಾನಂದ ಪರಬ್ರಹ್ಮ ಡಾ. ಆಠವಲೆಯವರು ಸಾಧಕರಿಗೆ ನೀಡಿದ ಭರವಸೆ !**

**ಸ್ಥೂಲದೇಹಕ್ಕಿಹುದು ಸ್ಥಳಕಾಲಗಳ ಪರಿಮಿತಿ ।**
**ಹೇಗಿರಲಿ ಸದಾ ಎಲ್ಲ ಕಡೆಗಳಲ್ಲಿ ॥**
**ಸನಾತನ ಧರ್ಮವಿಹುದು ನನ್ನ ನಿತ್ಯರೂಪ ।**
**ಆ ರೂಪದಲ್ಲಿರುವೆ ಎಲ್ಲ ಕಡೆಗಳಲ್ಲಿ ಸದಾ ॥**

Jayant Balaji Athavale
17.5.1996



**ಪೂ. ಸಂದೀಪ ಗಜಾನನ ಆಳಶಿ**

ಸನಾತನದ ಗ್ರಂಥಗಳ ಅಂತಿಮ ಸಂಕಲನಕಾರರು. ರಾಷ್ಟ್ರ ಜಾಗೃತಿ ಮತ್ತು ಧರ್ಮಪ್ರಸಾರ ಮಾಡುವ ಪ್ರಸಾರಸಾಹಿತ್ಯ (ಉದಾ. ಸನಾತನ ಪಂಚಾಂಗ, ಕರಪತ್ರ) ಹಾಗೂ ಸಾಧನೆ, ರಾಷ್ಟ್ರ ಮತ್ತು ಧರ್ಮ ಇವುಗಳಿಗೆ ಸಂಬಂಧಿಸಿದ ವರ್ತಮಾನಪತ್ರಿಕೆ 'ಸನಾತನ ಪ್ರಭಾತ'ದಲ್ಲಿ ಪ್ರಬೋಧನಾತ್ಮಕ ಲೇಖನವನ್ನು ಬರೆಯುತ್ತಾರೆ.

---

## ಅನುಕ್ರಮಣಿಕೆ


೧. ವ್ಯುತ್ಪತ್ತಿ ಮತ್ತು ಅರ್ಥ ೮

೨. ಇತರ ಕೆಲವು ಹೆಸರುಗಳು (ಭಗವಾನ್, ನಾರಾಯಣ, ಕಿರೀಟಧಾರಿ, ಲಕ್ಷ್ಮೀಪತಿ, ಹರಿ ಮತ್ತು ಶ್ರೀಹರಿ) ೮

೩. ಮೂರ್ತಿವಿಜ್ಞಾನ ೨೦

೪. ರೂಪಗಳು ಮತ್ತು ಪರಿವಾರ ೨೪

೫. ಕಾರ್ಯ ಮತ್ತು ವೈಶಿಷ್ಟ್ಯಗಳು ೩೨

೬. ದಶಾವತಾರ (ಮತ್ಸ್ಯ, ಕೂರ್ಮ, ವರಾಹ, ನೃಸಿಂಹ, ವಾಮನ, ಪರಶುರಾಮ, ಶ್ರೀರಾಮ, ಶ್ರೀಕೃಷ್ಣ, ಬುದ್ಧ ಮತ್ತು ಕಲ್ಕಿ) ೩೬

೭. ನಿವಾಸ, ವಿಷ್ಣುಲೋಕ (ವೈಕುಂಠ), ವಿಷ್ಣುಕ್ರಮ ಮತ್ತು ವಿಷ್ಣುಮಾರ್ಗ ೪೭

೮. ಭಾರತದಲ್ಲಿರುವ ಶ್ರೀವಿಷ್ಣುವಿನ ಪ್ರಸಿದ್ಧ ದೇವಸ್ಥಾನಗಳು ೪೮

೯. ಉಪಾಸನೆ ೪೮

೧೦. ಸಂಪ್ರದಾಯ ೬೧

೧೧. ಶ್ರೀವಿಷ್ಣುವಿನ ವಿಭೂತಿಗಳು ಮತ್ತು ಅಂಶಗಳು ೬೭

卐 ವಿಷ್ಣುವಿಗೆ ಸಂಬಂಧಿಸಿದ ಟೀಕೆಗಳು ಅಥವಾ ಅಯೋಗ್ಯ ವಿಚಾರಗಳು ಮತ್ತು ಅವುಗಳ ಖಂಡನೆ ೬೯

卐 ಆಧ್ಯಾತ್ಮಿಕ ಪರಿಭಾಷೆಯಲ್ಲಿನ ವೈಶಿಷ್ಟ್ಯಪೂರ್ಣ ಪ್ರಸ್ತಾವನೆ ! ೭೨

卐 ಸಂಕಲನಕಾರರ ವೈಜ್ಞಾನಿಕ ದೃಷ್ಟಿಕೋನ ಮತ್ತು ಇತರ ಮಾಹಿತಿ ೭೫

# ಮನೋಗತ

ಹೆಚ್ಚಿನ ಭಕ್ತರಿಗೆ ತಮ್ಮ ಶ್ರದ್ಧಾಸ್ಥಾನವಾಗಿರುವ ದೇವತೆಗಳ ಬಗೆಗಿನ ಅಲ್ಪಸ್ವಲ್ಪ ಜ್ಞಾನವು ಅವರು ಓದಿದ ಅಥವಾ ಕೇಳಿದ ಕಥೆಗಳಿಂದ ಸಿಕ್ಕಿರುತ್ತದೆ. ಇಂತಹ ಅಲ್ಪಸ್ವಲ್ಪ ಜ್ಞಾನದಿಂದಾಗಿಯೇ ದೇವತೆಗಳ ಮೇಲಿನ ಅವರ ವಿಶ್ವಾಸವೂ ಅಲ್ಪಸ್ವಲ್ಪವೇ ಆಗಿರುತ್ತದೆ. ದೇವತೆಗಳ ಬಗ್ಗೆ ಅಧ್ಯಾತ್ಮಶಾಸ್ತ್ರೀಯ ಜ್ಞಾನ ದೊರೆತರೆ ಅವರ ಬಗ್ಗೆ ಶ್ರದ್ಧೆ ನಿರ್ಮಾಣವಾಗುತ್ತದೆ. ಶ್ರದ್ಧೆಯಿಂದ ಉಪಾಸನೆಯು ಭಾವಪೂರ್ಣವಾಗಿ ಆಗಲು ಸಹಾಯವಾಗುತ್ತದೆ ಮತ್ತು ಭಾವಪೂರ್ಣ ಉಪಾಸನೆಯು ಹೆಚ್ಚು ಫಲಕಾರಿಯಾಗಿರುತ್ತದೆ. ಈ ದೃಷ್ಟಿಯಿಂದ ಈ ಗ್ರಂಥದಲ್ಲಿ ಶ್ರೀವಿಷ್ಣುವಿನ ಬಗ್ಗೆ ಬೇರೆ ಕಡೆಗಳಲ್ಲಿ ನೀಡದಿರುವ ಉಪಯುಕ್ತ ಅಧ್ಯಾತ್ಮಶಾಸ್ತ್ರೀಯ ಜ್ಞಾನವನ್ನು ನೀಡಲಾಗಿದೆ.

ಈ ಗ್ರಂಥದಲ್ಲಿನ ಅಧ್ಯಾತ್ಮಶಾಸ್ತ್ರೀಯ ಜ್ಞಾನವು ವಿಷ್ಣುಭಕ್ತರು ಮತ್ತು ಸಾಂಪ್ರದಾಯಿಕ ಸಾಧನೆಯನ್ನು ಮಾಡುವವರಿಗೆ ಖಂಡಿತವಾಗಿಯೂ ಉಪಯುಕ್ತವಾಗಿದೆ; ಆದರೆ ಸಾಮಾನ್ಯವ್ಯಕ್ತಿಗಳು ಈ ಸಂದರ್ಭದಲ್ಲಿ ಮುಂದಿನ ನಿಯಮವನ್ನು ಗಮನದಲ್ಲಿಡಬೇಕು. ಗಣಪತಿ ಅಥರ್ವಶೀರ್ಷವನ್ನು ಓದಿದಾಗ ಗಣಪತಿಯ ಹಾಗೂ ಶಿವಲೀಲಾಮೃತವನ್ನು ಓದಿದಾಗ ಶಿವನ ಉಪಾಸನೆಯನ್ನು ಮಾಡಬೇಕೆಂದು ಕೆಲವರಿಗೆ ಅನಿಸುತ್ತದೆ; ಹಾಗೆಯೇ ಈ ಗ್ರಂಥದಲ್ಲಿನ ಶ್ರೀವಿಷ್ಣುವಿನ ಜ್ಞಾನವನ್ನು ಓದಿ ನಾವೂ ಶ್ರೀವಿಷ್ಣುವಿನ ಉಪಾಸನೆಯನ್ನು ಮಾಡಬೇಕು ಎಂದು ಅನಿಸಬಹುದು. ಹೀಗೆ ಅನಿಸುವವರು ಶ್ರೀವಿಷ್ಣುವಿನಂತಹ ದೇವತೆಗಳ ಉಪಾಸನೆಯಿಂದ ಎಲ್ಲರ ಆಧ್ಯಾತ್ಮಿಕ ಉನ್ನತಿಯು ಶೀಘ್ರಗತಿಯಲ್ಲಿ ಆಗುವುದಿಲ್ಲ ಎಂಬುದನ್ನು ಗಮನದಲ್ಲಿಟ್ಟುಕೊಳ್ಳಬೇಕು; ಏಕೆಂದರೆ ಅವರಿಗೆ ಯಾವ ದೇವತೆಯ ಉಪಾಸನೆ ಮಾಡುವ ಆವಶ್ಯಕತೆ ಇರುತ್ತದೆಯೋ, ಆ ದೇವತೆಯ ಉಪಾಸನೆಯನ್ನು ಮಾಡಿದರೆ ಮಾತ್ರ ಅದರ ಹೆಚ್ಚಿನ ಲಾಭ ಸಿಗುತ್ತದೆ. ಇಲ್ಲದಿದ್ದರೆ ಬಹಳಷ್ಟು ಸಾಧನೆ ಮಾಡಿಯೂ ಹೆಚ್ಚಿನ ಪ್ರಗತಿಯಾಗುವುದಿಲ್ಲ. ಸಾಮಾನ್ಯವ್ಯಕ್ತಿಗಳಿಗೆ ಯಾವ ದೇವತೆಯ ಉಪಾಸನೆಯನ್ನು ಮಾಡಬೇಕು ಎಂಬುದು ತಿಳಿಯುವುದಿಲ್ಲ, ಕೇವಲ ಆಧ್ಯಾತ್ಮಿಕ ದೃಷ್ಟಿಯಲ್ಲಿ ಉನ್ನತರಾಗಿರುವವರೇ ಇದರ ಬಗ್ಗೆ ಹೇಳಬಲ್ಲರು; ಆದುದರಿಂದ ಸಾಮಾನ್ಯವ್ಯಕ್ತಿಗಳು ಕೇವಲ ಜ್ಞಾನಕ್ಕಾಗಿ ಈ ಗ್ರಂಥವನ್ನು ಓದಬೇಕು. ಮೇಲಿನ ದೇವತೆಯ ಅನುಭೂತಿ ಬರುವ ದೃಷ್ಟಿಯಿಂದ ಸಾಧನೆಯ ಮೊದಲನೇ ಹಂತವೆಂದು ಕುಲದೇವತೆಯ ನಾಮಜಪವನ್ನು ಮಾಡಬೇಕು. ಮುಂದೆ ಗುರುಗಳು ಮೇಲಿನ ಯಾವುದಾದರೊಂದು ದೇವತೆಯ ನಾಮಜಪವನ್ನು ಮಾಡಲು ಹೇಳಿದರೆ ಅಥವಾ ಸಾಧನೆಯಿಂದ ಆಧ್ಯಾತ್ಮಿಕ ಉನ್ನತಿಯ ವಿಶಿಷ್ಟ ಹಂತವನ್ನು ತಲುಪಿದ ನಂತರ ಮುಂದಿನ ಆಧ್ಯಾತ್ಮಿಕ ಉನ್ನತಿಗಾಗಿ ಮೇಲಿನವುಗಳಲ್ಲಿನ ಯಾವುದಾದರೊಂದು ದೇವತೆಯ ಉಪಾಸನೆ ಮಾಡುವುದು

ಆವಶ್ಯಕವಾಗಿರುವಾಗ, ಆ ದೇವತೆಯ ಮೇಲಿನ ಶ್ರದ್ಧೆಯನ್ನು ಹೆಚ್ಚಿಸಲು ಈ ಜ್ಞಾನ ಉಪಯುಕ್ತವಾಗಬಹುದು. ಈ ಗ್ರಂಥವನ್ನು ಓದಿ ಹಿಂದೂಗಳಲ್ಲಿ ತಮ್ಮ ಶ್ರದ್ಧಾಸ್ಥಾನದ ಮೇಲಿನ ಶ್ರದ್ಧೆಯು ದೃಢವಾಗಲಿ ಮತ್ತು ಅವರಿಗೆ ಹೆಚ್ಚು ಸಾಧನೆ ಮಾಡಲು ಪ್ರೇರಣೆ ದೊರೆಯಲಿ, ಎಂದು ಶ್ರೀ ಗುರುಚರಣಗಳಲ್ಲಿ ಪ್ರಾರ್ಥನೆ. – **ಸಂಕಲನಕಾರರು**

## ಪರಾತ್ಪರ ಗುರು ಡಾ. ಜಯಂತ ಆಠವಲೆಯವರ 'ಸಚ್ಚಿದಾನಂದ ಪರಬ್ರಹ್ಮ' ಎಂಬ ಬಿರುದಿನ ಕುರಿತಾದ ವಿವೇಚನೆ !

೧೩.೭.೨೦೨೨ ರಿಂದ 'ಸಪ್ತರ್ಷಿ ಜೀವನಾಡಿಪಟ್ಟಿ'ಯ ವಾಚನದ ಮಾಧ್ಯಮದಿಂದ ಸಪ್ತರ್ಷಿಗಳ ಆಜ್ಞೆಯಂತೆ ಪರಾತ್ಪರ ಗುರು ಡಾ. ಆಠವಲೆಯವರನ್ನು 'ಸಚ್ಚಿದಾನಂದ ಪರಬ್ರಹ್ಮ' ಎಂದು ಸಂಬೋಧಿಸಲಾಗುತ್ತಿದೆ. ಇದಕ್ಕೂ ಮೊದಲು ಗ್ರಂಥಗಳಲ್ಲಿ ಅವರನ್ನು 'ಪ.ಪೂ. (ಪರಮ ಪೂಜ್ಯ)' ಮತ್ತು 'ಪರಾತ್ಪರ ಗುರು' ಎಂಬ ಬಿರುದುಗಳಿಂದ ಸಂಬೋಧಿಸಲಾಗಿದೆ. ಇದಕ್ಕನುಸಾರ ಪ್ರಸ್ತುತ ಗ್ರಂಥದ ಮುಖಪುಟದಲ್ಲಿ ಮತ್ತು ಗ್ರಂಥದಲ್ಲಿ ಆವಶ್ಯಕವಿರುವ ಕಡೆ ಹೀಗೆ ಉಲ್ಲೇಖಿಸಲಾಗಿದೆ.

## ಸನಾತನದ ಇಬ್ಬರೂ ಸದ್ಗುರುಗಳ ಹೆಸರಿಗೆ ವಿಶಿಷ್ಟ ಆಧ್ಯಾತ್ಮಿಕ ಬಿರುದು ಸೇರಿಸಿರುವುದರ ಹಿಂದಿನ ಕಾರಣ

ನಾಡಿಪಟ್ಟಿವಾಚನದ ಮಾಧ್ಯಮದಿಂದ ಸಪ್ತರ್ಷಿಗಳ ಆಜ್ಞೆಗನುಸಾರ ೧೩.೫.೨೦೨೦ ರಿಂದ ಸದ್ಗುರು (ಸೌ.) ಬಿಂದಾ ನೀಲೇಶ ಸಿಂಗಬಾಳರನ್ನು 'ಶ್ರೀಸತ್‌ಶಕ್ತಿ (ಸೌ.) ಬಿಂದಾ ನೀಲೇಶ ಸಿಂಗಬಾಳ' ಮತ್ತು ಸದ್ಗುರು (ಸೌ.) ಅಂಜಲಿ ಮುಕುಲ ಗಾಡಗೀಳರನ್ನು 'ಶ್ರೀಚಿತ್‌ಶಕ್ತಿ (ಸೌ.) ಅಂಜಲಿ ಮುಕುಲ ಗಾಡಗೀಳ' ಎಂದು ಸಂಬೋಧಿಸಲಾಗುತ್ತಿದೆ. ಈ ಇಬ್ಬರೂ ಸಂತರು ಸಚ್ಚಿದಾನಂದ ಪರಬ್ರಹ್ಮ ಡಾ. ಆಠವಲೆಯವರ ಆಧ್ಯಾತ್ಮಿಕ ಉತ್ತರಾಧಿಕಾರಿಗಳಾಗಿದ್ದಾರೆ.

### ಸನಾತನದ ದೇವತೆಗಳ ಬಗೆಗಿನ ಮಾಲಿಕೆಯ ಗ್ರಂಥ : ಪರಮೇಶ್ವರ ಮತ್ತು ಈಶ್ವರ

ಈ ಗ್ರಂಥದಲ್ಲಿ ಪರಮೇಶ್ವರ ಮತ್ತು ಈಶ್ವರನ ಮಹತ್ವ, ಅವರ ವಿವಿಧ ಗುಣ ವೈಶಿಷ್ಟ್ಯಗಳು, ಕಾರ್ಯ, ಮಾನವನೊಂದಿಗೆ ಅವರಿಗಿರುವ ಸಂಬಂಧ ಇತ್ಯಾದಿಗಳ ಬಗ್ಗೆ ವಿವೇಚನೆಯನ್ನು ಮಾಡಲಾಗಿದೆ. ಅವರ ಬಗ್ಗೆ ಸಾಧಕರಿಗೆ ಬಂದ ಅನುಭೂತಿಗಳನ್ನು ಓದಿ ಅವರ ಬಗೆಗಿನ ನಿಮ್ಮ ಶ್ರದ್ಧೆ ದೃಢವಾಗಲು ಸಹಾಯವಾಗುವುದು.